ಶ್ರೀ ಜಿ. ರಾಮೇಗೌಡ :—ಕಳೆದ ವಾರ ಇದೇ ಸೊಸೈಟಿಯ ಮೇಲೆ ಇದೇ ರೀತಿಯ ಪ್ರಶ್ನೆ ಬಂದು ಇದೇ ಉತ್ತರ ಕೊಟ್ಟಿರುವಾಗ ಈ ಪ್ರಶ್ನೆಯನ್ನು ಆಡ್ಮಿಟ್ ಮಾಡಿದ್ದಾರೆ.

ಅಧ್ಯಕ್ಷರು :—ಅದರಲ್ಲಿ ಬೇರೆ ವಿಚಾರ ಸಹ ಕೇಳಿದ್ದಾರೆ, ಅದನ್ನು ಒದಗಿಸಬೇಕಾಗಿತ್ತು.

ಶ್ರೀ ಎಚ್. ಎಸ್. ಸಿದ್ದಪ್ಪ :—ಎಷ್ಟನೇ ತಾರೀಖು ಬುಕ್ಸ್ ಸೀಜ್ ಮಾಡಿರುವುದು ?

ಶ್ರೀ ಎ. ಶಂಕರ ಆಳ್ವ :—ಜನವರಿ ೯ನೆಯ ತಾರೀಖು ರಿಜಿಸ್ಟ್ರಾರರು ಆದೇಶ ಕೊಟ್ಟರು. ಅದರ ಪ್ರಕಾರ ತನಿಖೆ ಮಾಡುತ್ತಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ :—ಈ ಸಂಘಕ್ಕೆ ರೇಷ್ಮೆ ಒದಗಿಸಿರುವುದೆಷ್ಟು ? ಎಂಥ ವರ್ಗಗಳಿಗೆ ಇದನ್ನು ಹಂಚಲಾಗಿದೆ ?

ಶ್ರೀ ಎ. ಶಂಕರ ಆಳ್ವ :—ಎಲ್ಲರಿಗೂ ಹಂಚಿದೆ ಎಷ್ಟು ಜನರಿಗೆ ಎಂಬ ವಿವರವಿಲ್ಲ.

ಶ್ರೀ ಎಂ. ಸಿದ್ದಮಾದಯ್ಯ :—ದುರುಪಯೋಗವಾಗಿರುವುದನ್ನು ನೋಡಿ ಕ್ರಮ ತಪ್ಪಿತಸ್ಥರ ಮೇಲೆ ತೆಗದುಕೊಳ್ಳುವುದು ಯಾವಾಗ ?

ಶ್ರೀ ಎ. ಶಂಕರ ಆಳ್ವ :—ಇದರ ಬಗ್ಗೆ ವರದಿ ಬಂದ ನಂತರ.

CONSTRUCTION OF WASTE WEIR ON KENCHANAPURA TANK

1009. SRI. BETTASWAMY GOWDA (*Kudur*) .—Will the Minister for Public Works and Electrieity be pleased to state :—

(*a*) the reason for not constructing wasteweir to Kenchanapura tank in Magadi Taluk so far ,

(*b*) When the Government proposes to construct waste weir to the above said tank ?

SRI H. M. CHANNABASAPPA (*Minister for Public Work and Electricity*)

(*a*) The construction work of waterweir is not taken up as the revised estimate is not yet sactioned.

(*b*) After sanctioning the revised estimate the work will be taken up.

ಶ್ರೀ ಬೆಟ್ಟಸ್ವಾಮಿಗೌಡ :—ಕೆಂಚನಪುರ ಕೆರೆಯ ಕೋಡಿಯ ಕೆಲಸ ಇನ್ನೂ ಮುಂಜೂರಾಗದೆ ಉಳಿದಿರುವುದಕ್ಕೆ ಕಾರಣವೇನು ?

† ಶ್ರೀ ಎಚ್. ಎಂ. ಚನ್ನಬಸಪ್ಪ :—ಎಲ್ಲಿ ಏನು ತಪ್ಪಾಗಿದೆ, ಯಾರು ತಪ್ಪು ಮಾಡಿದ್ದಾರೆ ಎಂದು ಪತ್ತೆಮಾಡಿ ಯಾರು ಇದಕ್ಕೆ ಜವಾಬ್ದಾರರು ಎಂಬುದನ್ನು ನೋಡಿ ಮುಂದಿನ ಕೆಲಸ ಮಾಡಬೇಕು.

ಶ್ರೀ ಬೆಟ್ಟಸ್ವಾಮಿಗೌಡ :—ಒಡೆದುಹೋಗಿ ಸುಮಾರು ಆಕೇಳು ವರ್ಷವಾಗಿದೆ. ಬೇಗನೆ ಕೋಡಿ ಕೆಲಸ ಮಾಡದಿದ್ದರೆ ಇಡೀ ಕೆರೆಯೇ ಒಡೆದುಹೋಗುವುದು ಎಂಬುದು ಅವಗಾಹನೆಗೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಒಡೆದು ಐದಾರು ವರ್ಷವಾಗಿರುವುದು ಗಮನಕ್ಕೆ ಬಂದಿದೆ. ಇದನ್ನು ಕಟ್ಟಬೇಕಾದರ ಸ್ಕೆಂಟಿಫಿಕ್ಕಾಗಿ ಎಗ್ಜಾಮಿನ್ ಮಾಡಬೇಕು ಇದರಿಂದ ವಿಳಂಬವಾಗಿದೆ ಕಟ್ಟಲು ಅಂದಾಜು ಕೂಡ ಬಂದಿದೆ. ಅದು ಮುಂಜೂರಾದಮೇಲೆ ಕೆಲಸ ತೆಗೆದುಕೊಳ್ಳಲಾಗುವುದು.

ಶ್ರೀ ಟಿ. ಎಂ. ಮಂಜುನಾಥ .– ಕೋಡಿ ತೂಬು ಮಂಂತಾದುವುಗಳ ರಿಪೇರಿಗೆ ಪ್ರಾಶಸ್ತ್ಯ ಕೊಡ ಲಾಗುವುದೆಂದು ಮಂತ್ರಿಗಳು ಹೇಳಿದ್ದರು ಹಾಗಿರುವಾಗ ಏಕೆ ನಿಧಾನವಾಗಿದೆ ? ಜಾಗ್ರತೆ ಕ್ರಮ ತೆಗೆದು ಕೊಳ್ಳಲು ಅಸಿಸ್ಟೆಂಟ್ ಎಂಜಿನಿಯರಿಗೆ ಆದೇಶ ಕೊಡಲಾಗಿದೆಯೇ ? ರಿವೈಜ್ ಅಂದಾಜು ಮಾಡಲು ತಡ ವಾಗಿದ್ದಕ್ಕೆ ಏಕೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಂಡಿಲ್ಲ ?

ಶ್ರೀ ಎಚ್. ಎಂ. ಚನ್ನಬಸಪ್ಪ .—ಇದರ ವಿಚಾರವೇ ಬೇರೆ. ಈ ಕೆರೆ ೧೯೬೨ರಲ್ಲಿ ಮಂಜೂರಾಗಿ ೧೯೬೬ರಲ್ಲಿ ಕೆಲಸವಾಗಿತ್ತು. ಹೇರಳವಾಗಿ ಮಳೆ ಬಂದು ಕೋಡಿ ಮಂತ್ತು ಏರಿ ಒಡೆದು ಹೋಗಿದೆ. ಸುಮಾರು ೩ ಲಕ್ಷದಲ್ಲಾಗಿದ್ದ ಕೆಲಸಕ್ಕೆ ಈಗ ೫ ಲಕ್ಷ ಖರ್ಚು ಮಾಡಬೇಕಾಗಿದೆ. ಇದು ಸಣ್ಣಪುಟ್ಟ ರಿಪೇರಿ ಕೆಲಸವಲ್ಲ.

ಶ್ರೀ ಬೆಟ್ಟಸ್ವಾಮಿಗೌಡ .—ಯಾವಾಗ ಅಂದಾಜನ್ನು ಮಂಜೂರು ಮಾಡಿ ಕೋಡಿ ಕೆಲಸ ಮಾಡಲಾಗುವುದು.

ಶ್ರೀ ಎಚ್. ಎಂ. ಚನ್ನಬಸಪ್ಪ .—ರಿವೈಜ್ಡ್ ಎಸ್ಟಿಮೇಟ್ ಮಂಜೂರಾದ ಕೂಡಲೆ ಕೆಲಸ ತೆಗೆದು ಕೊಳ್ಳಲಾಗುವುದು.

ಶ್ರೀ ಬೆಟ್ಟಸ್ವಾಮಿಗೌಡ .—ಕೋಡಿ ಕೆಲಸ ಬೇಗ ಆಗದಿದ್ದರೆ ತೊಂದರೆಯಾಗುವುದರಿಂದ ಇದರ ಬಗ್ಗೆ ಬೇಗ ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ .—ಇದು ನಿರ್ವಿವಾದವಾದ ವಿಚಾರ.

M S.R.T.C. BUS SERVICE IN VILLAGES OF CHIKODI ASSEMBLY CONSTITUENCY

889. SRI P. P. HEGDE (Chikodi).—

Will the Minister for Labour be pleased to state :—

(*a*) the names of the villages in Chikodi Assembly Constituency where MSRTC buses are not plying ;

(*b*) the reason for not providing any bus service to those villages ;

(*c*) whether the Government is contemplating to provide bus services to any of these vilages ;

(*d*) if so, the names of those villages and the time required for starting bus services ;

(*e*) the names of the villages and routes where buses cannot be operated due to bad roads ?

SRI AZEEZ SAIT (Minister for Labour).—

(*a*) Names of the villages are : Kuntoll, Beljud, Donawad, Kargaon, Jainapur Bidarahalli, Sanakamadi Tapakarwadi Manganoor, Akkiwat, Ankale, Shiraguppi, Gondikop, Shandur, Janwad, Kusaud, Mankapur, Itral, Hadnal, Mathiwade, Salagaon, Vadagon, Yadanwadi, Mallikwad, Ramapur, Chikkalwad, Manuwadi, Pangire, Hirekudi, Nagasal, Nej.